# ವಿಜ್ಞಾನಿಯ ಲಕ್ಷಣ



❋ ಭಗವಂತನ ಸಂಬಂಧವಾಗಿ ಪ್ರಶ್ನೆ ಹಾಕಿದ ಹೊರತು ತಾವಾಗೇ ಜ್ಞಾನಿಗಳು ಆತನ ಮಾತು ಎತ್ತುವುದಿಲ್ಲ. ಜನ ಅವರನ್ನು ಸಮೀಪಿಸಿದೊಡನೇ ಅವರಿಗೆ ಕೆಲವು ಕುಶಲ ಪ್ರಶ್ನೆಗಳನ್ನು ಹಾಕಿ ಸುಮ್ಮನಿದ್ದುಬಿಡುತ್ತಾರೆ. ಆದರೆ ವಿಜ್ಞಾನಿಗಳ ಸ್ವಭಾವ ಬೇರೆ. ಅವರಿಗೆ ಈ ಜಗತ್ತಿನ ಎಲ್ಲದರ ಮೇಲೂ ಔದಾಸೀನ್ಯ. ಒಮ್ಮೊಮ್ಮೆ ಅವರು ಉಟ್ಟಿದ್ದ ಬಟ್ಟೆ ಕಳಚಿ ಎಲ್ಲೋ ಬಿದ್ದುಹೋಗಿಬಿಡಬಹುದು ಅಥವಾ ಅವನ್ನು ಕಂಕುಳಲ್ಲಿ ಇರುಕಿಕೊಂಡು ಮಕ್ಕಳ ಹಾಗೆ ಸುತ್ತಾಡಬಹುದು.

❋ ಭಗವಂತನಿದ್ದಾನೆ ಎಂಬುದಾಗಿ ತಿಳಿದುಕೊಂಡಿರುವವನಿಗೆ 'ಜ್ಞಾನಿ' ಅಂತ ಹೆಸರು. ಕಟ್ಟಿಗೆಯಲ್ಲಿ ನಿಶ್ಚಯವಾಗಿಯೂ ಬೆಂಕಿ ಇದೆ ಎಂಬುದಾಗಿ ಅರಿತುಕೊಂಡಿರುವವನೇ ಜ್ಞಾನಿ. ಆದರೆ ಯಾರು ಅದನ್ನು ಹೊತ್ತಿಸಿ, ಅದರಿಂದ ಅಡಿಗೆ ಮಾಡಿ ತೇಗು ಬರುವವರೆಗೆ ಊಟ ಮಾಡುವನೋ ಆತನೇ ವಿಜ್ಞಾನಿ. ವಿಜ್ಞಾನಿಯ ಅಷ್ಟಪಾಶಗಳೂ ಕಳಚಿ ಹೋಗುತ್ತದೆ — ಕಾಮಕ್ರೋಧಾದಿಗಳ ಚಿಹ್ನೆ ಮಾತ್ರ ಉಳಿದುಕೊಂಡಿರುತ್ತದೆ.

❋ ವಿಜ್ಞಾನಿ ಸತತ ಭಗವದ್ದರ್ಶನ ಮಾಡುತ್ತಿರುತ್ತಾನೆ. ಅದಕ್ಕೇ ಆತನಿಗೆ ಈ ಜಗತ್ತಿನ ಕಡೆ ಉದಾಸೀನಭಾವ. ಈ ಕಣ್ಣುಗಳನ್ನು ತೆರೆದುಕೊಂಡೇ ಆತನ ದರ್ಶನ ಮಾಡುತ್ತಾನೆ. ಕೆಲವು ವೇಳೆ ನಿತ್ಯದಿಂದ ಲೀಲೆಗೆ ಇಳಿದುಬರುತ್ತಾನೆ, ಇನ್ನು ಕೆಲವು ವೇಳೆ ಲೀಲೆಯಿಂದ ನಿತ್ಯಕ್ಕೆ ಹತ್ತಿಹೋಗುತ್ತಾನೆ.

❋ ಜ್ಞಾನಿ 'ನೇತಿ, ನೇತಿ', 'ಇದಲ್ಲ, ಇದಲ್ಲ' ಎಂದು ವಿಚಾರ ಮಾಡಿ ಕೊನೆಗೆ ನಿತ್ಯ ಅಖಂಡ ಸಚ್ಚಿದಾನಂದವನ್ನು ಮುಟ್ಟಿಬಿಡುತ್ತಾನೆ. ಆತ ಈ ರೀತಿ ವಿಚಾರ ಮಾಡುತ್ತಾನೆ: 'ಬ್ರಹ್ಮ ಜೀವವಲ್ಲ, ಜಗತ್ತಲ್ಲ, ಚತುರ್ವಿಂಶತಿ ತತ್ತ್ವವಲ್ಲ'. ಈ ವಿಧವಾದ ವಿಚಾರದಿಂದ ಕೊನೆಗೆ ಸಚ್ಚಿದಾನಂದ ಸಾಕ್ಷಾತ್ಕಾರ ದೊರೆಯುತ್ತದೆ. ಆಗ ಆತನಿಗೆ ಅನುಭವವಾಗುತ್ತದೆ, ಆತನೇ ಇದೆಲ್ಲ ಆಗಿರುವ ಹಾಗೆ — ಜೀವ, ಜಗತ್ತು, ಚತುರ್ವಿಂಶತಿ ತತ್ತ್ವ ಎಲ್ಲ.

❋ ಹಾಲಿಗೆ ಹೆಪ್ಪು ಹಾಕಿ ಮೊಸರು ಮಾಡಿ ಕಡೆದು ಬೆಣ್ಣೆ ತೆಗೆಯಬೇಕು. ಬೆಣ್ಣೆಯನ್ನು ತೆಗೆದ ನಂತರ ಅರ್ಥವಾಗುತ್ತದೆ, ಬೆಣ್ಣೆ ಮಜ್ಜಿಗೆಗೆ ಸೇರಿದ್ದು, ಮಜ್ಜಿಗೆ ಬೆಣ್ಣೆಗೆ ಸೇರಿದ್ದು ಎಂಬುದಾಗಿ. ತೊಗಟೆ ಕಾಂಡಕ್ಕೆ ಸೇರಿದ್ದು, ಕಾಂಡ ತೊಗಟೆಗೆ ಸೇರಿದ್ದು. ಬೆಣ್ಣೆಯ ಉತ್ಪನ್ನದೊಡನೆ ಮಜ್ಜಿಗೆಯೂ ಉತ್ಪನ್ನವಾಗಲೇಬೇಕು. ಬೆಣ್ಣೆಯ ಭಾವನೆಯೊಡನೆ ಮಜ್ಜಿಗೆಯ ಭಾವನೆಯನ್ನೂ ಮಾಡಲೇಬೇಕು — ಏಕೆಂದರೆ ಮಜ್ಜಿಗೆ ಉತ್ಪನ್ನವಾಗದಿದ್ದರೆ ಬೆಣ್ಣೆಯೂ ಉತ್ಪನ್ನವಾಗುವ ಹಾಗಿಲ್ಲ. ಈ ಕಾರಣದಿಂದ ನಿತ್ಯವನ್ನು ಒಪ್ಪಿಕೊಂಡರೆ ಲೀಲೆಯನ್ನೂ ಒಪ್ಪಿಕೊಳ್ಳಬೇಕಾಗುತ್ತದೆ. ಮೊದಲು ವಿಲೋಮ, ಅನಂತರ ಅನುಲೋಮ. ಸಾಕಾರ ನಿರಾಕಾರಗಳನ್ನು ಸಾಕ್ಷಾತ್ಕಾರ ಮಾಡಿಕೊಂಡ ನಂತರ ಈ ಅವಸ್ಥೆ ಉಂಟಾಗುತ್ತದೆ. ಸಾಕಾರವು ಚಿನ್ಮಯ ರೂಪ; ನಿರಾಕಾರವು ಅಖಂಡ ಸಚ್ಚಿದಾನಂದ.

❋ ಬ್ರಹ್ಮನೇ ಎಲ್ಲವೂ ಆಗಿದ್ದಾನೆ. ಆದ್ದರಿಂದ ವಿಜ್ಞಾನಿಗೆ ಈ ಜಗತ್ತು ಒಂದು 'ಆನಂದ ಭವನ.' ಆದರೆ ಜ್ಞಾನಿಗೆ ಒಂದು 'ಮಾಯೆಯ ಚೌಕಟ್ಟು'. ರಾಮಪ್ರಸಾದ ಈ ಜಗತ್ತನ್ನು ಒಂದು 'ಮಾಯೆಯ ಚೌಕಟ್ಟು' ಎಂದು ವರ್ಣನೆಮಾಡಿದ. ಇನ್ನೊಬ್ಬ ಅದಕ್ಕೆ ಎದುರುತ್ತರ ಕೊಟ್ಟ:

ಈ ಜಗವೆಂಬುದು ಮೋಜಿನ ಮನೆಯೊ!
ಇದರೊಳು ನಾ ಮನಬಂದೊಲು ನಡೆವೆ......

❋ ವಿಜ್ಞಾನಿ ಭಗವದಾನಂದವನ್ನು ವಿಶೇಷವಾಗಿ ಅನುಭವಿಸುತ್ತಾನೆ. ಕೆಲವರು ಹಾಲಿನ ಸಂಬಂಧವಾಗಿ ಕೇಳಿದ್ದಾರೆ. ಇನ್ನು ಕೆಲವರು ಅದನ್ನು ನೋಡಿದ್ದಾರೆ, ಮತ್ತೆ ಕೆಲವರು ಅದನ್ನು ಕುಡಿದಿದ್ದಾರೆ. ವಿಜ್ಞಾನಿ ಹಾಲನ್ನು ಕುಡಿದಿರುವುದೂ ಅಲ್ಲದೆ, ಕುಡಿದ ನಂತರ ಆನಂದವನ್ನೂ ಪಟ್ಟಿದ್ದಾನೆ, ಪುಷ್ಟನೂ ಆಗಿದ್ದಾನೆ.

❋ ಬರಿಯ ಜ್ಞಾನಿ ಭಯಗ್ರಸ್ತ. ಆತನದು ಅಭ್ಯಾಸವಿಲ್ಲದ ಪಗಡೆಯಾಟಗಾರನ ಮನೋವೃತ್ತಿ — ಹೇಗೋ ಕಾಯಿಯನ್ನು ಹಣ್ಣುಮಾಡಿಕೊಂಡುಬಿಟ್ಟರೆ ಸಾಕಪ್ಪ ಎನ್ನುವ ಮನೋವೃತ್ತಿ. ಆದರೆ ವಿಜ್ಞಾನಿ ಯಾವುದಕ್ಕೂ ಹೆದರುವುದಿಲ್ಲ. ಆತ ಸಾಕಾರ, ನಿರಾಕಾರ, ಎರಡನ್ನೂ ಸಾಕ್ಷಾತ್ಕಾರ ಮಾಡಿಕೊಂಡುಬಿಟ್ಟಿದ್ದಾನೆ. ಭಗವಂತನೊಡನೆ ಮಾತುಕತೆಯಾಡಿದ್ದಾನೆ. ಭಗವದಾನಂದವನ್ನು ಅನುಭವಿಸಿದ್ದಾನೆ. ವಿಜ್ಞಾನಿಗೆ ಮನಸ್ಸು ಧ್ಯಾನದ ಮೂಲಕ ಅಖಂಡ ಸಚ್ಚಿದಾನಂದದಲ್ಲಿ ಲಯವಾಗಿ ಹೋದರೂ ಆನಂದವೇ, ಲಯವಾಗದೆ ಲೀಲೆಯಲ್ಲಿ ನೆಲೆಸಿದ್ದರೂ ಆನಂದವೇ. *(ಸಂಪುಟ ೧, ಪು.೫೧೬-೫೨೦)*

**ಶ್ರೀರಾಮಕೃಷ್ಣ ವಚನವೇದದಿಂದ**